## ಜೈವಿಜ್ಞಾನ್

## 10ನೇ ತರಗತಿ

## ವಿಜ್ಞಾನ

# ವ್ಯತ್ಯಾಸಗಳ ಕೈಪಿಡಿ

ನಾಗರಾಜು ನೆಟ್ಕಲ್
ವಿಜ್ಞಾನ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ಆಲದಹಳ್ಳಿ,ಮಳವಳ್ಳಿ ತಾ॥
ಮಂಡ್ಯ ಜಿಲ್ಲೆ–571430
9880165534



# ಅಧ್ಯಾಯ–1

## ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

**10.** ಸ್ಥಾನಪಲ್ಲಟ ಕ್ರಿಯೆ ಮತ್ತು ದ್ವಿಸ್ಥಾನಪಲ್ಲಟ ಕ್ರಿಯೆಗಳ ನಡುವಿನ ವ್ಯತ್ಯಾಸವೇನು ?

| ಸ್ಥಾನಪಲ್ಲಟ ಕ್ರಿಯೆ | ದ್ವಿಸ್ಥಾನಪಲ್ಲಟ ಕ್ರಿಯೆ |
|---|---|
| • ಹೆಚ್ಚು ಕ್ರಿಯಾಶೀಲ ಧಾತುವು ಸಂಯುಕ್ತದಲ್ಲಿನ ಕಡಿಮೆ ಕ್ರಿಯಾಶೀಲ ಧಾತುವನ್ನು ಸ್ಥಾನಪಲ್ಲಟಗೊಳಿಸುವ ರಾಸಾಯನಿಕ ಕ್ರಿಯೆಯೇ ಸ್ಥಾನಪಲ್ಲಟ ಕ್ರಿಯೆ.<br>• **ಉದಾಹರಣೆ : $Zn + CuSO_4 \rightarrow ZnSO_4 + Cu$** | • ಪ್ರತಿವರ್ತಕಗಳ ನಡುವೆ ಅಯಾನುಗಳು ವಿನಿಮಯ ನಡೆಯುವ ರಾಸಾಯನಿಕ ಕ್ರಿಯೆಯೇ ದ್ವಿಸ್ಥಾನಪಲ್ಲಟ ಕ್ರಿಯೆ.<br>• **ಉದಾಹರಣೆ : $Na_2SO_4 + BaCl_2 \rightarrow BaSO_4 + 2NaCl$** |

**11.** ಅಂತರುಷ್ಣಕ ಮತ್ತು ಬಹಿರುಷ್ಣಕ ಕ್ರಿಯೆಗಳು ಎಂದರೇನು ? ಉದಾಹರಣೆ ಕೊಡಿ.

**ಅಥವಾ**

ಅಂತರುಷ್ಣಕ ಮತ್ತು ಬಹಿರುಷ್ಣಕ ಕ್ರಿಯೆಗಳಿಗಿರುವ ವ್ಯತ್ಯಾಸಗಳೇನು ?

| ಅಂತರುಷ್ಣಕ ಕ್ರಿಯೆ | ಬಹಿರುಷ್ಣಕ ಕ್ರಿಯೆ |
|---|---|
| • ರಾಸಾಯನಿಕ ಕ್ರಿಯೆಯಲ್ಲಿ ಶಕ್ತಿ ಹೀರಿಕೆಯಾದರೆ ಅದು ಅಂತರುಷ್ಣಕ ಕ್ರಿಯೆ.<br>• **ಉದಾಹರಣೆ : $CaCO_3 \rightarrow CaO + CO_2$** | • ಉತ್ಪನ್ನಗಳೊಂದಿಗೆ ಉಷ್ಣ ಬಿಡುಗಡೆಯಾಗುವ ರಾಸಾಯನಿಕ ಕ್ರಿಯೆಯೇ ಬಹಿರುಷ್ಣಕ ಕ್ರಿಯೆ<br>• **ಉದಾಹರಣೆ** :$CaO + H_2O \rightarrow Ca(OH)_2$ + ಉಷ್ಣ |

**18.** ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆಗಳಿಗಿರುವ ವ್ಯತ್ಯಾಸಗಳೇನು ?

| ಉತ್ಕರ್ಷಣ | ಅಪಕರ್ಷಣ |
|---|---|
| • ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಅನ್ನು ಪಡೆದುಕೊಂಡರೆ ಅಥವಾ ಹೈಡ್ರೋಜನ್ ಅನ್ನು ಕಳೆದುಕೊಂಡರೆ ಅದು ಉತ್ಕರ್ಷಣೆ<br>• $CuO + H_2 \rightarrow Cu + H_2O$ ಈ ಕ್ರಿಯೆಯಲ್ಲಿ ಹೈಡ್ರೋಜನ್ ಆಕ್ಸಿಜನ್ ಅನ್ನು ಪಡೆದುಕೊಂಡು ಉತ್ಕರ್ಷಣೆಗೊಂಡಿದೆ. | • ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಅನ್ನು ಕಳೆದುಕೊಂಡರೆ ಅಥವಾ ಹೈಡ್ರೋಜನ್ ಅನ್ನು ಪಡೆದುಕೊಂಡರೆ ಅದು ಅಪಕರ್ಷಣೆ<br>• $CuO + H_2 \rightarrow Cu + H_2O$ ಈ ಕ್ರಿಯೆಯಲ್ಲಿ ತಾಮ್ರದ ಆಕ್ಸೈಡ್ ಆಕ್ಸಿಜನ್ ಅನ್ನು ಕಳೆದುಕೊಂಡು ಅಪಕರ್ಷಣೆಗೊಂಡಿದೆ. |

# ಅಧ್ಯಾಯ–2

# ಆಮ್ಲಗಳು ,ಪ್ರತ್ಯಾಮ್ಲಗಳು ಮತ್ತು ಲವಣಗಳು

**1.ಆಮ್ಲ ಮತ್ತು ಪ್ರತ್ಯಾಮ್ಲಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.**

| ಆಮ್ಲ | ಪ್ರತ್ಯಾಮ್ಲ |
|---|---|
| • ಹುಳಿ ರುಚಿಯನ್ನು ಹೊಂದಿವೆ.<br>• ನೀರಿನಲ್ಲಿ ಕರಗಿದಾಗ ಆಮ್ಲಗಳು ಹೈಡ್ರೋಜನ್ ಅಯಾನುಗಳನ್ನು ಬಿಡುಗಡೆ ಮಾಡುತ್ತವೆ.<br>• ಆಮ್ಲಗಳು ನೀಲಿ ಲಿಟ್ಮಸ್ ಕಾಗದವನ್ನು ಕೆಂಪುಬಣ್ಣಕ್ಕೆ ಬದಲಾಯಿಸುತ್ತವೆ. | • ಕಹಿ ರುಚಿಯನ್ನು ಹೊಂದಿವೆ.<br>• ನೀರಿನಲ್ಲಿ ಕರಗಿದಾಗ ಪ್ರತ್ಯಾಮ್ಲಗಳು ಹೈಡ್ರಾಕ್ಸಿಲ್ ಅಯಾನುಗಳನ್ನು ಬಿಡುಗಡೆ ಮಾಡುತ್ತವೆ.<br>• ಪ್ರತ್ಯಾಮ್ಲಗಳು ಕೆಂಪು ಲಿಟ್ಮಸ್ ಕಾಗದವನ್ನು ನೀಲಿ ಬಣ್ಣಕ್ಕೆ ಬದಲಾಯಿಸುತ್ತವೆ. |

# ಅಧ್ಯಾಯ –3

# ಲೋಹಗಳು ಮತ್ತು ಅಲೋಹಗಳು

**11.ಲೋಹಗಳು ಮತ್ತು ಅಲೋಹಗಳ ನಡುವಿನ ರಾಸಾಯನಿಕ ಗುಣಲಕ್ಷಣಗಳ ವ್ಯತ್ಯಾಸವನ್ನು ತಿಳಿಸಿ.**

| ಲೋಹಗಳ ರಾಸಾಯನಿಕ ಗುಣಲಕ್ಷಣ | ಅಲೋಹಗಳ ರಾಸಾಯನಿಕ ಗುಣಲಕ್ಷಣ |
|---|---|
| • ಲೋಹಗಳು ಸುಲಭವಾಗಿ ಇಲೆಕ್ಟ್ರಾನ್ ಗಳನ್ನು ಕಳೆದುಕೊಂಡು ಧನ ಅಯಾನುಗಳಾಗುತ್ತವೆ<br>• ಲೋಹಗಳು ಪ್ರತ್ಯಾಮ್ಲೀಯ ಆಕ್ಸೈಡ್‌ಗಳನ್ನು ಉಂಟುಮಾಡುತ್ತವೆ. ಆದ್ದರಿಂದ, ಕೆಂಪು ಲಿಟ್ಮಸ್ ಅನ್ನು ನೀಲಿ ಬಣ್ಣಕ್ಕೆ ಬದಲಾಯಿಸುತ್ತವೆ.<br>• ಲೋಹಗಳು ಕಡಿಮೆ ಸಾರತೆಯ ಆಮ್ಲಗಳಿಂದ ಹೈಡ್ರೋಜನ್ ಅನ್ನು ಸ್ಥಾನಪಲ್ಲಟಗೊಳಿಸುತ್ತವೆ. | • ಅಲೋಹಗಳು ಸುಲಭವಾಗಿ ಇಲೆಕ್ಟ್ರಾನುಗಳನ್ನು ಸ್ವೀಕರಿಸಿ ಋಣ ಅಯಾನುಗಳಾಗುತ್ತವೆ<br>• ಅಲೋಹಗಳು ಆಮ್ಲೀಯ ಆಕ್ಸೈಡುಗಳನ್ನು ಉಂಟುಮಾಡುತ್ತವೆ. ಆದ್ದರಿಂದ, ನೀಲಿ ಲಿಟ್ಮಸ್ ಅನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತವೆ.<br>• ಅಲೋಹಗಳು ಕಡಿಮೆ ಸಾರತೆಯ ಆಮ್ಲಗಳಿಂದ ಹೈಡ್ರೋಜನ್‌ಅನ್ನು ಸ್ಥಾನಪಲ್ಲಟಗೊಳಿಸುವುದಿಲ್ಲ. |

3. **ಲೋಹ ಮತ್ತು ಅಲೋಹಗಳ ನಡುವಣ ಯಾವುದಾದರೂ 2 ರಾಸಾಯನಿಕ ವ್ಯತ್ಯಾಸಗಳನ್ನು ಬರೆಯಿರಿ**

| ಲೋಹ | ಅಲೋಹ |
|---|---|
| • ಇವು ಎಲೆಕ್ಟ್ರಾನ್‌ಗಳನ್ನು ದಾನ ಮಾಡುತ್ತವೆ.<br>• ಧನ ಅಯಾನುಗಳನ್ನು ಉಂಟು ಮಾಡುತ್ತವೆ.<br>• ಆಕ್ಸಿಜನ್ ಜೊತೆ ವರ್ತಿಸಿ ಪ್ರತ್ಯಾಮ್ಲೀಯ ಆಕ್ಸೈಡ್‌ಗಳನ್ನು ಉಂಟು ಮಾಡುತ್ತದೆ.<br>• ಕೆಂಪು ಲಿಟ್ಮಸ್ ಕಾಗದವನ್ನು ನೀಲಿ ಬಣ್ಣಕ್ಕೆ ಬದಲಾಯಿಸುತ್ತವೆ.<br>• ಸಾರರಿಕ್ತ ಆಮ್ಲದೊಂದಿಗೆ ವರ್ತಿಸಿ ಹೈಡ್ರೋಜನ್ ಬಿಡುಗಡೆ ಮಾಡುತ್ತವೆ | • ಇವು ಇಲೆಕ್ಟ್ರಾನುಗಳನ್ನು ಸ್ವೀಕರಿಸುತ್ತವೆ.<br>• ಆನಯಾನುಗಳನ್ನು ಉಂಟುಮಾಡುತ್ತವೆ<br>• ಆಕ್ಸಿಜನ್ ಜೊತೆ ವರ್ತಿಸಿ ಆಮ್ಲೀಯ ಆಕ್ಸೈಡ್‌ಗಳನ್ನು ಉಂಟುಮಾಡುತ್ತವೆ.<br>• ನೀಲಿ ಲಿಟ್ಮಸ್ ಕಾಗದವನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತವೆ.<br>• |

| ಕಾಸುವಿಕೆ | ಹುರಿಯುವಿಕೆ |
|---|---|
| • ಕಾರ್ಬೋನೇಟ್ ಅದುರನ್ನು ಆಕ್ಸೈಡ್‌ಆಗಿ ಪರಿವರ್ತಿಸಲು ಕಡಿಮೆ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸುವ ವಿಧಾನ<br>• ZnCO3 → ZnO + CO2 | • ಸಲ್ಫೈಡ್ ಅದುರನ್ನು ಆಕ್ಸೈಡ್‌ಆಗಿ ಪರಿವರ್ತಿಸಲು ಅಧಿಕ ಪ್ರಮಾಣದ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸುವ ವಿಧಾನ<br>• $2ZnS + 3O_2 \rightarrow 2ZnO + 2SO_2$ |

# ಅಧ್ಯಾಯ–4

## ಕಾರ್ಬನ್ ಮತ್ತು ಅದರ ಸಂಯುಕ್ತಗಳು

9. **ಪರ್ಯಾಪ್ತ ಮತ್ತು ಅಪರ್ಯಾಪ್ತ ಹೈಡ್ರೋಕಾರ್ಬನ್ ಗಳಿಗಿರುವ ವ್ಯತ್ಯಾಸವೇನು ?**

| ಪರ್ಯಾಪ್ತ ಹೈಡ್ರೋಕಾರ್ಬನ್ | ಅಪರ್ಯಾಪ್ತ ಹೈಡ್ರೋಕಾರ್ಬನ್ |
|---|---|
| • ಎರಡು ಅನುಕ್ರಮ ಕಾರ್ಬನ್ ಪರಮಾಣುಗಳು ಏಕ ಬಂಧದಿಂದ ಸಂತೃಪ್ತ ಗೊಂಡಿರುತ್ತವೆ.<br>• ಇವುಗಳು ರಾಸಾಯನಿಕವಾಗಿ ಕ್ರಿಯಾಶೀಲ ವಲ್ಲ | • ಎರಡು ಅನುಕ್ರಮ ಕಾರ್ಬನ್ ಪರಮಾಣುಗಳ ನಡುವೆ ದ್ವಿಬಂಧ ಅಥವಾ ತ್ರಿಬಂಧ ಇದ್ದರೆ ಅಂಥವುಗಳನ್ನು ಅಪರ್ಯಾಪ್ತ ಹೈಡ್ರೋಕಾರ್ಬನ್ ಗಳು ಎನ್ನುವರು.<br>• ಇವುಗಳು ರಾಸಾಯನಿಕವಾಗಿ ಕ್ರಿಯಾಶೀಲವಾಗಿವೆ. |

**11. ಆಲ್ಕೇನ್ ಮತ್ತು ಆಲ್ಕೀನ್‌ಗಳ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.**

| ಆಲ್ಕೇನ್ | ಆಲ್ಕೀನ್ |
|---|---|
| • ಎರಡು ಅನು ಕ್ರಮ ಕಾರ್ಬನ್ ಪರಮಾಣುಗಳ ನಡುವೆ ಏಕ ಬಂಧವಿರುತ್ತದೆ.<br>• ಇವುಗಳ ಸಾಮಾನ್ಯ ಅಣುಸೂತ್ರ $C_nH_{2n+2}$<br>• ರಾಸಾಯನಿಕವಾಗಿ ಸ್ಥಿರ | • ಎರಡು ಅನು ಕ್ರಮ ಕಾರ್ಬನ್ ಪರಮಾಣುಗಳ ನಡುವೆ ದ್ವಿಬಂಧ ವಿರುತ್ತದೆ..<br>• ಇವುಗಳ ಸಾಮಾನ್ಯ ಅಣುಸೂತ್ರ $C_nH_n$<br>• ಇವರ ರಾಸಾಯನಿಕವಾಗಿ ಕ್ರಿಯಾಶೀಲವಾಗಿವೆ. |

# ಅಧ್ಯಾಯ –5
## ಧಾತುಗಳ ಆವರ್ತನೀಯ ವರ್ಗೀಕರಣ

**3. ಆಧುನಿಕ ಆವರ್ತ ಕೋಷ್ಟಕ ಮತ್ತು ಮೆಂಡಲೀವ್‌ರವರ ಆವರ್ತಕೋಷ್ಟಕಗಳ ನಡುವೆ ಇರುವ ವ್ಯತ್ಯಾಸಗಳೇನು ?**

| ಆಧುನಿಕ ಆವರ್ತಕೋಷ್ಟಕ | ಮೆಂಡಲೀವ್ ಆವರ್ತಕೋಷ್ಟಕ |
|---|---|
| • ಪರಮಾಣು ಸಂಖ್ಯೆಯ ಏರಿಕೆಯ ಆಧಾರದ ಮೇಲೆ ರಚಿತವಾಗಿದೆ.<br>• 7 ಆವರ್ತಗಳು 18 ಗುಂಪುಗಳಿವೆ.<br>• ಸಮಸ್ಥಾನಿಗಳನ್ನು ಪರಿಗಣಿಸಲಾಗಿಲ್ಲ. | • ಪರಮಾಣು ರಾಶಿಯ ಏರಿಕೆಯ ಆಧಾರದ ಮೇಲೆ ರಚಿತವಾಗಿದೆ.<br>• 7 ಆವರ್ತಗಳು 8 ಗುಂಪುಗಳಿವೆ.<br>• ಸಮಸ್ಥಾನಿಗಳಿಗೆ ಯಾವುದೇ ಸ್ಥಾನವಿಲ್ಲ. |

# ಅಧ್ಯಾಯ–6
## ಜೀವ ಕ್ರಿಯೆಗಳು

**2. ಸ್ವಪೋಷಕಗಳಿಗೂ ಮತ್ತು ಪರಪೋಷಕಗಳಿಗೂ ಇರುವ ವ್ಯತ್ಯಾಸವೇನು ?**

| ಸ್ವಪೋಷಕಗಳು | ಪರಪೋಷಕಗಳು |
|---|---|
| ✓ ತಮ್ಮ ಆಹಾರವನ್ನು ತಾವೇ ತಯಾರಿಸಕೊಳ್ಳುತ್ತವೆ.<br>✓ ಉದಾ: ಹಸಿರು ಸಸ್ಯಗಳು,ಶೈವಲಗಳು | ✓ ಆಹಾರಕ್ಕಾಗಿ ಇತರ ಜೀವಿಗಳನ್ನು ಅವಲಂಬಿಸಿರುವಜೀವಿಗಳನ್ನು ಪರಪೋಷಕಗಳೆನ್ನುವರು.<br>✓ ಉದಾ: ಶಿಲೀಂಧ್ರಗಳು,ಕೆಲವು ಬ್ಯಾಕ್ಟೀರಿಯಾಗಳು ಮತ್ತು ಪ್ರಾಣಿಗಳು |

6. ಅಪಧಮನಿಗಳಿಗೂ ಮತ್ತು ಅಭಿಧಮನಿಗಳಿಗೂ ಇರುವ ವ್ಯತ್ಯಾಸವೇನು ?

| ಅಪಧಮನಿಗಳು | ಅಭಿಧಮನಿಗಳು |
|---|---|
| ✓ ರಕ್ತವನ್ನು ಹೃದಯದಿಂದ ದೇಹದ ವಿವಿಧ ಅಂಗಗಳಿಗೆ ಕೊಂಡೊಯ್ಯುತ್ತವೆ.<br>✓ ದಪ್ಪವಾದ,ಸ್ಥಿತಿಸ್ಥಾಪಕ ಭಿತ್ತಿಯನ್ನು ಹೊಂದಿವೆ.<br>✓ ಅತಿ ಹೆಚ್ಚಿನ ಒತ್ತಡದಲ್ಲಿ ರಕ್ತವನ್ನು ಕೊಂಡೊಯ್ಯುತ್ತವೆ. | ✓ ವಿಭಿನ್ನ ಅಂಗಗಳಿಂದ ರಕ್ತವನ್ನು ಸಂಗ್ರಹಿಸಿ ಹೃದಯಕ್ಕೆ ಮರಳಿ ತರುತ್ತವೆ.<br>✓ ದಪ್ಪವಾದ,ಸ್ಥಿತಿಸ್ಥಾಪಕ ಭಿತ್ತಿಯನ್ನು ಹೊಂದಿಲ್ಲ.<br>✓ ಕಡಿಮೆ ಒತ್ತಡದಲ್ಲಿ ರಕ್ತವನ್ನು ಕೊಂಡೊಯ್ಯುತ್ತವೆ. |

8.ರಕ್ತ ಮತ್ತು ದುಗ್ದರಸದ ನಡುವೆ ಇರುವ ವ್ಯತ್ಯಾಸವೇನು ?

| ರಕ್ತ | ದುಗ್ದರಸ |
|---|---|
| • ಕೆಂಪು ಬಣ್ಣದಲ್ಲಿದೆ.<br>• ಕೆಂಪು ರಕ್ತಕಣಗಳನ್ನು ಹೊಂದಿದೆ.<br>• ಹೆಚ್ಚು ಪ್ರೋಟೀನ್ ಅನ್ನು ಹೊಂದಿದೆ. | • ಬಣ್ಣರಹಿತವಾಗಿದೆ.<br>• ಕೆಂಪು ರಕ್ತಕಣಗಳನ್ನು ಹೊಂದಿಲ್ಲ.<br>• ಕಡಿಮೆ ಪ್ರೋಟೀನ್ ಅನ್ನು ಹೊಂದಿದೆ. |

18. ಸ್ವಯಂ ಪೋಷಣೆ ಮತ್ತು ಅಧೀನ ಪೋಷಣೆಗಳಿಗೆ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

| ಸ್ವಯಂ ಪೋಷಣೆ | ಅಧೀನ ಪೋಷಣೆ |
|---|---|
| • ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುವ ವಿಧಾನ<br>• ಈ ವಿಧಾನದಲ್ಲಿ ಜೀವಿಗಳು ನಿರವಯವ ಮೂಲಗಳಿಂದ ಸರಳವಾದ ಆಹಾರ ವಸ್ತುಗಳನ್ನು $CO_2$ & $H_2O$ ರೂಪದಲ್ಲಿ ಬಳಸಿಕೊಳ್ಳುತ್ತವೆ. | • ಇತರ ಮೂಲಗಳಿಂದ ತಮ್ಮ ಆಹಾರವನ್ನು ಪಡೆದುಕೊಳ್ಳುವ ವಿಧಾನ<br>• ಈ ವಿಧಾನದಲ್ಲಿ ಜೀವಿಗಳು ಸಂಕೀರ್ಣ ವಸ್ತುಗಳನ್ನು ಸರಳ ವಸ್ತುಗಳಾಗಿ ವಿಭಜಿಸುತ್ತದೆ. |

25.ರಚನೆ ಮತ್ತು ಕಾರ್ಯನಿರ್ವಹಣೆಯ ಆಧಾರದ ಮೇಲೆ ಶ್ವಾಸಕೋಶಗಳಲ್ಲಿರುವ ಗಾಳಿಗೂಡುಗಳನ್ನು ಮತ್ತು ಮೂತ್ರಪಿಂಡಗಳಲ್ಲಿರುವ ನೆಫ್ರಾನ್‌ಗಳನ್ನು ಹೋಲಿಕೆ ಮಾಡಿ.

| ಗಾಳಿಗೂಡುಗಳು | ನೆಫ್ರಾನ್‌ಗಳು |
|---|---|
| • ಶ್ವಾಸಕೋಶಗಳಲ್ಲಿರುವ ಬಲೂನಿನಂತಹ ರಚನೆಗಳು<br>• ಹೆಚ್ಚು ತೆಳುವಾದ ಭಿತ್ತಿಯನ್ನು ಹೊಂದಿವೆ.<br>• ಗಾಳಿಗೂಡುಗಳವಿಶಾಲ ಮೇಲ್ಮೈ ಮೇಲೆ ಹೆಚ್ಚಿನ ರಕ್ತನಾಳಗಳಿದ್ದು ಆಕ್ಸಿಜನ್ ಮತ್ತು | • ಮೂತ್ರಪಿಂಡಗಳಲಿರುವ ನಳಿಕೆಯಾಕಾರದ ರಚನೆಗಳು<br>• ಗಾಳಿಗೂಡುಗಳ ಭಿತ್ತಿಗೆ ಹೋಲಿಸಿದರೆ ಭಿತ್ತಿಯು ದಪ್ಪವಾಗಿರುತ್ತದೆ.<br>• ಅಪಧಮನಿಯ ಕವಲುಗಳ ಮೂಲಕ |

| | |
|---|---|
| ದೇಹದಲ್ಲಿ ಉತ್ಪತ್ತಿಯಾದ ಕಾರ್ಬನ್ ಡೈ ಆಕ್ಸೈಡ್ ಅನ್ನು ವಿನಿಮಯ ಮಾಡಿಕೊಳ್ಳುವುದು. | ರಕ್ತದಲ್ಲಿರುವ ತ್ಯಾಜ್ಯಗಳು ನೆಫ್ರಾನ್‌ಗೆ ಸೋಸಲ್ಪಡುತ್ತವೆ.ಮೂತ್ರದ ಉತ್ಪತ್ತಿಯ ಮೂಲಕ ತ್ಯಾಜ್ಯವನ್ನು ಹೊರಹಾಕುತ್ತವೆ. |

**26. ಅಪಧಮನಿಗಳಿಗೂ ಮತ್ತು ಅಭಿಧಮನಿಗಳಿಗೂ ಇರುವ ವ್ಯತ್ಯಾಸವೇನು ?**

| ಗಾಳಿಗೂಡುಗಳು (ಆಲ್ವಿಯೋಲೈಗಳು) | ವಿಲ್ಲೈಗಳು |
|---|---|
| • ಶ್ವಾಸಕೋಶಗಳಲ್ಲಿರುವ ಬಲೂನಿನಂತಹ ರಚನೆಗಳು<br>• ಹೆಚ್ಚು ತೆಳುವಾದ ಭಿತ್ತಿಯನ್ನು ಹೊಂದಿವೆ.<br>• ಗಾಳಿಗೂಡುಗಳವಿಶಾಲ ಮೇಲ್ಮೈ ಮೇಲೆ ಹೆಚ್ಚಿನ ರಕ್ತನಾಳಗಳಿದ್ದು ಆಕ್ಸಿಜನ್ ಮತ್ತು ದೇಹದಲ್ಲಿ ಉತ್ಪತ್ತಿಯಾದ ಕಾರ್ಬನ್ ಡೈ ಆಕ್ಸೈಡ್ ಅನ್ನು ವಿನಿಮಯ ಮಾಡಿಕೊಳ್ಳುವುದು. | • ಸಣ್ಣ ಕರುಳಿನಲ್ಲಿ ಕಂಡು ಬರುವ ಬೆರಳಿನಂತಹ ರಚನೆಗಳು<br>• ಆಹಾರವನ್ನು ಹೀರಿಕೊಳ್ಳಲು ಬೇಕಾದ ಮೇಲ್ಮೈ ಪ್ರದೇಶವನ್ನು ಹೆಚ್ಚಿಸುತ್ತವೆ.<br>• ವಿಲ್ಲೈಗಳು ರಕ್ತನಾಳಗಳಿಂದ ಸಮೃದ್ಧವಾಗಿವೆ. |

1. **ಉಸಿರಾಟದ ವಿಧಗಳನ್ನು ತಿಳಿಸಿ ಮತ್ತು ಅವುಗಳ ನಡುವಣ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.**

**ಎರಡು ವಿಧಗಳು :** 1) ವಾಯುವಿಕ ಉಸಿರಾಟ ii) ಅವಾಯುವಿಕ ಉಸಿರಾಟ

| ವಾಯುವಿಕ ಉಸಿರಾಟ | ಅವಾಯುವಿಕ ಉಸಿರಾಟ |
|---|---|
| • ವಾತಾವರಣದ ಆಕ್ಸಿಜನ್ ಬಳಕೆಯಾಗುತ್ತದೆ.<br>• ಅಧಿಕ ಶಕ್ತಿಯೊಂದಿಗೆ ಕಾರ್ಬನ್ ಡೈಆಕ್ಸೈಡ್ ಮತ್ತು ನೀರು ಬಿಡುಗಡೆಯಾಗುತ್ತದೆ.<br>• ಮೈಟೋಕಾಂಡ್ರಿಯಾದಲ್ಲಿ ಜರುಗುತ್ತದೆ.<br>• ಉನ್ನತ ಜೀವಿಗಳಲ್ಲಿ ಕಂಡುಬರುತ್ತದೆ. | • ವಾತಾವರಣದ ಆಕ್ಸಿಜನ್ ಬಳಕೆಯಾಗುವುದಿಲ್ಲ<br>• ಕಡಿಮೆ ಶಕ್ತಿಯೊಂದಿಗೆ ಇಥೆನಾಲ್ ಮತ್ತು । ಕಾರ್ಬನ್ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ.<br>• ಕೋಶದ್ರವ್ಯದಲ್ಲಿ ಜರುಗುತ್ತದೆ.<br>• ಯೀಸ್ಟ್‌ನಂತಹ ಕೆಳವರ್ಗದ ಜೀವಿಗಳಲ್ಲಿ ಕಂಡುಬರುತ್ತದೆ. |

# ಅಧ್ಯಾಯ –7

# ನಿಯಂತ್ರಣ ಮತ್ತು ಸಹಭಾಗಿತ್ವ

**3. ಪ್ರಾಣಿಗಳಲ್ಲಿ ನಿಯಂತ್ರಣ ಮತ್ತು ಸಹಭಾಗಿತ್ವವನ್ನು ರೂಪಿಸುವಲ್ಲಿ, ನರವ್ಯೂಹ ವ್ಯವಸ್ಥೆಯು, ಅಂತಃಸ್ರಾವಕ ಗ್ರಂಥಿಗಳವ್ಯೂಹದ ವ್ಯವಸ್ಥೆಗಿಂತ ಹೇಗೆ ಭಿನ್ನವಾಗಿದೆ ?**

| ನರವ್ಯೂಹ ವ್ಯವಸ್ಥೆ | ಅಂತಃಸ್ರಾವಕ ಗ್ರಂಥಿಗಳವ್ಯೂಹ |
|---|---|
| • ಸಂದೇಶಗಳು ನರಾವೇಗಗಳ ಮೂಲಕ ಸಾಗಿಸಲ್ಪಡುತ್ತವೆ.<br>• ಇದರ ಪರಿಣಾಮ ಅಲ್ಪಾವಧಿಯದು.<br>• ಸಂದೇಶಗಳು ಬಹುಬೇಗನೆ ಸಾಗಿಸಲ್ಪಡುತ್ತದೆ. ಮತ್ತು ಪ್ರತಿಕ್ರಿಯೆಗಳು ಬಹುಬೇಗನೆ ಜರುಗುತ್ತದೆ.<br>• ಸಂದೇಶಗಳು ನರಕೋಶಗಳಲ್ಲಿನ ಆಕ್ಸಾನ್ ಮತ್ತು ಡೆಂಡ್ರೈಟ್‌ಗಳ ಸಹಭಾಗಿತ್ವದೊಂದಿಗೆ ನಡೆಯುತ್ತದೆ. | • ಸಂದೇಶಗಳು ಹಾರ್ಮೋನ್‌ಗಳೆಂಬ ವಿಶಿಷ್ಟ ರಾಸಾಯನಿಕಗಳ ಮೂಲಕ ಸಾಗಿಸಲ್ಪಡುತ್ತದೆ.<br>• ಇದರ ಪರಿಣಾಮ ದೀರ್ಘಾವಧಿಯದು<br>• ಸಂದೇಶಗಳು ನಿಧಾನವಾಗಿ ಸಾಗಿಸಲ್ಪಡುತ್ತದೆ. ಮತ್ತು ಪ್ರತಿಕ್ರಿಯೆಗಳು ನಿಧಾನವಾಗಿ ಜರುಗುತ್ತದೆ.<br>• ಸಂದೇಶಗಳು ರಕ್ತದ ಮೂಲಕ ಸಾಗಿಸಲ್ಪಡುತ್ತದೆ. |

**ನಡಿಗೆ ಮತ್ತು ಪರಾವರ್ತಿತ ಪ್ರತಿಕ್ರಿಯೆ ಇವುಗಳ ನಡುವಿನ ವ್ಯತ್ಯಾಸವೇನು ?**

| ನಡಿಗೆ | ಪರಾವರ್ತಿತ ಪ್ರತಿಕ್ರಿಯೆ |
|---|---|
| • ನಮ್ಮ ಇಚ್ಛೆಗೆ ಒಳಪಟ್ಟು ನಡೆಯುವ ಐಚ್ಛಿಕ ಪ್ರತಿಕ್ರಿಯೆಯಾಗಿದೆ.<br>• ನಡಿಗೆಯು ಮಿದುಳಿನ ನಿಯಂತ್ರಣದಲ್ಲಿ ನಡೆಯುತ್ತದೆ.<br>• ಉದಾ: ನಮ್ಮ ಇಚ್ಛೆಗೆ ಒಳಪಟ್ಟು ಚಲಿಸುವ ಕೈ ಕಾಲುಗಳು | • ಪರಿಸರದಲ್ಲಿ ಉಂಟಾಗುವ ಒಂದು ಪ್ರಚೋದನೆಗೆ ತಾನೇ ತಾನಾಗಿ ಉಂಟಾಗುವ ಪ್ರತಿಕ್ರಿಯೆಯಾಗಿದೆ.<br>• ಪರಾವರ್ತಿತ ಪ್ರತಿಕ್ರಿಯೆಯು ಮಿದುಳು ಬಳ್ಳಿಯ ನಿಯಂತ್ರಣದಲ್ಲಿ ನಡೆಯುತ್ತದೆ.<br>• ಉದಾ : ಬೆಂಕಿಯ ಜ್ವಾಲೆಯನ್ನು ಮುಟ್ಟಿದಾಗ ಕೈಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳುವುದು. |

**ಬಿ) ಕೇಂದ್ರ ನರವ್ಯೂಹ ಮತ್ತು ಪರಿಧಿ ನರವ್ಯೂಹಕ್ಕಿರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.**

| ಕೇಂದ್ರ ನರವ್ಯೂಹ | ಪರಿಧಿ ನರವ್ಯೂಹ |
|---|---|
| • ಮಿದುಳು ಹಾಗೂ ಮಿದುಳು ಬಳ್ಳಿಯನ್ನು ಒಳಗೊಂಡಿದೆ.<br>• ಅವು ದೇಹದ ಎಲ್ಲಾ ಭಾಗಗಳಿಂದ ಮಾಹಿತಿಯನ್ನು ಸ್ವೀಕರಿಸುತ್ತವೆ ಮತ್ತು ಅದನ್ನು ಸಂಯೋಜಿಸುತ್ತವೆ. | • 12 ಜೊತೆ ಮೆದುಳು ನರಗಳು ಹಾಗೂ 31 ಜೊತೆ ಮೆದುಳು ಬಳ್ಳಿಯ ನರಗಳನ್ನು ಒಳಗೊಂಡಿದೆ.<br>• ಕೇಂದ್ರ ನರವ್ಯೂಹ ಮತ್ತು ದೇಹದ ಇತರ ಭಾಗಗಳ ನಡುವಿನ ಸಂವಹನವನ್ನು ಪರಿಧಿ ನರವ್ಯೂಹವು ಅನುಕೂಲಿಸುತ್ತವೆ. |

**2) ನಿರ್ನಾಳ ಗ್ರಂಥಿ ಮತ್ತು ನರವ್ಯೂಹಗಳ ನಡುವಣ ಎರಡು ವ್ಯತ್ಯಾಸಗಳನ್ನು ಬರೆಯಿರಿ.**

| ನಿರ್ನಾಳ ಗ್ರಂಥಿ | ನರವ್ಯೂಹ |
|---|---|
| • ಸಂದೇಶಗಳು ಹಾರ್ಮೋನ್‌ಗಳೆಂಬ ವಿಶಿಷ್ಟ ರಾಸಾಯನಿಕಗಳ ಮೂಲಕ ಸಾಗಿಸಲ್ಪಡುತ್ತದೆ.<br>• ಇದರ ಪರಿಣಾಮ ದೀರ್ಘಾವಧಿಯದು<br>• ಸಂದೇಶಗಳು ನಿಧಾನವಾಗಿ ಸಾಗಿಸಲ್ಪಡುತ್ತದೆ. ಮತ್ತು ಪ್ರತಿಕ್ರಿಯೆಗಳು ನಿಧಾನವಾಗಿ ಜರುಗುತ್ತದೆ.<br>• ಸಂದೇಶಗಳು ರಕ್ತದ ಮೂಲಕ ಸಾಗಿಸಲ್ಪಡುತ್ತದೆ. | • ಸಂದೇಶಗಳು ನರಾವೇಗಗಳ ಮೂಲಕ ಸಾಗಿಸಲ್ಪಡುತ್ತವೆ.<br>• ಇದರ ಪರಿಣಾಮ ಅಲ್ಪಾವಧಿಯದು.<br>• ಸಂದೇಶಗಳು ಬಹುಬೇಗನೆ ಸಾಗಿಸಲ್ಪಡುತ್ತದೆ. ಮತ್ತು ಪ್ರತಿಕ್ರಿಯೆಗಳು ಬಹುಬೇಗನೆ ಜರುಗುತ್ತದೆ.<br>• ಸಂದೇಶಗಳು ನರಕೋಶಗಳಲ್ಲಿನ ಆಕ್ಸಾನ್ ಮತ್ತು ಡೆಂಡ್ರೈಟ್‌ಗಳ ಸಹಭಾಗಿತ್ವದೊಂದಿಗೆ ನಡೆಯುತ್ತದೆ. |

**3. ಬಹುಕೋಶಿಯ ಜೀವಿಗಳಲ್ಲಿ ವಿದ್ಯುತ್ ಸಂವಹನಕ್ಕೆ ಹೋಲಿಸಿದರೆ, ರಾಸಾಯನಿಕ ಸಂವಹನವು ಹೆಚ್ಚು ಸ್ಥಿರವಾಗಿರುತ್ತದೆ ಮತ್ತು ನಿರಂತರವಾಗಿರುತ್ತದೆ. ಈ ವಾಕ್ಯವನ್ನು ವಿಶ್ಲೇಷಿಸಿ.**

| ವಿದ್ಯುತ್ ಸಂವಹನ | ರಾಸಾಯನಿಕ ಸಂವಹನ |
|---|---|
| • ಮಾಹಿತಿಯು ವಿದ್ಯುದಾವೇಗಗಳ ಮೂಲಕ ಸಾಗುವುದು<br>• ನರಕೋಶಗಳ ಮೂಲಕ ಮಾಹಿತಿಯು ವರ್ಗಾವಣೆಯಾಗುವುದು.<br>• ತಕ್ಷಣದಲ್ಲೇ ಪ್ರತಿಕ್ರಿಯೆ<br>• ಪರಿಣಾಮ ಕಡಿಮೆಅವಧಿಯದ್ದಾಗಿರುತ್ತದೆ. | • ಮಾಹಿತಿಯು ರಾಸಾಯನಿಕಗಗಳ ಮೂಲಕ ಸಾಗುವುದು<br>• ಹಾರ್ಮೋನ್‌ಗಳು ರಕ್ತದ ಮೂಲಕ ಸಾಗಿ ದೇಹದ ಎಲ್ಲಾ ಜೀವಕೋಶಗಳನ್ನು ತಲುಪುತ್ತದೆ.<br>• ಪ್ರತಿಕ್ರಿಯೆ ಸಾಮಾನ್ಯವಾಗಿ ನಿಧಾನವಾಗಿರುತ್ತದೆ.<br>• ಪರಿಣಾಮ ದೀರ್ಘಕಾಲದ್ದಾಗಿರುತ್ತದೆ. |

# ಅಧ್ಯಾಯ – 8

# ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ ?

**3.ಪರಾಗಸ್ಪರ್ಶಕ್ರಿಯೆ ಮತ್ತು ನಿಶೇಚನ ಕ್ರಿಯೆಗೂ ಇರುವ ವ್ಯತ್ಯಾಸಗಳೇನು ?**

| ಪರಾಗಸ್ಪರ್ಶ ಕ್ರಿಯೆ | ನಿಶೇಚನ ಕ್ರಿಯೆ |
|---|---|
| • ಕೇಸರದಿಂದ ಪರಾಗರೇಣುಗಳು ಶಲಾಕಾಗ್ರಕ್ಕೆ ವರ್ಗಾಯಿಸುವ ಕ್ರಿಯೆ.<br>• ಭೌತ ಕ್ರಿಯೆಯಾಗಿದ್ದು ಯಾವುದೇ ಹೊಸ ವಸ್ತು ಅಥವಾ ರಚನೆ ಉಂಟಾಗುವುದಿಲ್ಲ.<br>• ಸ್ವಕೀಯ ಮತ್ತು ಪರಕೀಯ ಎಂಬ ಎರಡು ವಿಧಗಳಿವೆ | • ಗಂಡು ಮತ್ತು ಹೆಣ್ಣು ಲಿಂಗಾಣು ಕೋಶಗಳು ಅಂಡಾಶಯದಲ್ಲಿ ಸಮ್ಮಿಲನ ಹೊಂದುವ ಕ್ರಿಯೆ.<br>• ರಾಸಾಯನಿಕ ಕ್ರಿಯೆಯಾಗಿದ್ದು ಯುಗ್ಮಜ ಎಂಬ ಹೊಸ ವಸ್ತು ಅಥವಾ ರಚನೆ ಉಂಟಾಗುತ್ತದೆ<br>• ಆಂತರಿಕ ಮತ್ತು ಬಾಹ್ಯ ನಿಶೇಚನ ಇದರ ಎರಡು ವಿಧಗಳು |

12.ದ್ವಿವಿದಳನವು ಬಹುವಿದಳನದಿಂದ ಹೇಗೆ ಭಿನ್ನವಾಗಿದೆ ?

| ದ್ವಿವಿದಳನ | ಬಹುವಿದಳನ |
|---|---|
| ✓ ಏಕಕೋಶ ಜೀವಿಗಳಲ್ಲಿ ಜೀವಕೋಶವು ವಿಭಜನೆಯ ಮೂಲಕ ಹೊಸ ಜೀವಿ ಸೃಷ್ಟಿಯಾಗುವುದನ್ನು ವಿದಳನ ಎನ್ನುವರು.<br>✓ ಉದಾಹರಣೆ : ಬಹುತೇಕ ಬ್ಯಾಕ್ಟೀರಿಯಾಗಳಲ್ಲಿ,ಅಮೀಬಾದಲ್ಲಿ ತಾಯಿಕೋಶವು ಎರಡು ಮರಿಕೋಶಗಳಾಗಿ ವಿಭಜನೆ ಹೊಂದುವುದು. | ✓ ಒಂದೇ ಬಾರಿಗೆ ಅನೇಕ ಮರಿ ಜೀವಕೋಶಗಳು ಉಂಟಾಗುವುದನ್ನು ಬಹುವಿದಳನ ಎನ್ನುವರು.<br>✓ ಉದಾಹರಣೆ : ಮಲೇರಿಯಾ ರೋಗಕ್ಕೆ ಕಾರಣವಾದ ಪ್ಲಾಸ್ಮೋಡಿಯಂ ವಿಭಜನೆ ಹೊಂದಿ ಅನೇಕ ಮರಿ ಕೋಶಗಳನ್ನು ಉತ್ಪತ್ತಿ ಮಾಡುತ್ತದೆ. |

ಸ್ವಕೀಯ ಪರಾಗಸ್ಪರ್ಶ ಮತ್ತು ಪರಕೀಯ ಪರಾಗಸ್ಪರ್ಶ

| ಸ್ವಕೀಯ ಪರಾಗಸ್ಪರ್ಶ | ಪರಕೀಯ ಪರಾಗಸ್ಪರ್ಶ |
|---|---|
| • ಒಂದು ಹೂವಿನ ಕೇಸರದಿಂದ ಪರಾಗರೇಣುಗಳು ಅದೇ ಹೂವಿನ ಶಲಾಕಾಗ್ರಕ್ಕೆ ವರ್ಗಾವಣೆ ಹೊಂದುವುದನ್ನು ಸ್ವಕೀಯ ಪರಾಗಸ್ಪರ್ಶ ಎನ್ನುವರು.<br>• ಪರಾಗದ ವರ್ಗಾವಣೆಗೆ ಮಾಧ್ಯಮದ ಅವಶ್ಯಕತೆ ಇಲ್ಲ. | • ಒಂದು ಹೂವಿನ ಕೇಸರದಿಂದ ಪರಾಗರೇಣುಗಳು ಇನ್ನೊಂದು ಹೂವಿನ ಶಲಾಕಾಗ್ರಕ್ಕೆ ವರ್ಗಾವಣೆ ಹೊಂದುವುದನ್ನು ಸ್ವಕೀಯ ಪರಾಗಸ್ಪರ್ಶ ಎನ್ನುವರು.<br>• ಪರಾಗದ ವರ್ಗಾವಣೆಗೆ ಗಾಳಿ, ನೀರು ಅಥವಾ ಪ್ರಾಣಿ ಗಳಂತಹ ಮಾಧ್ಯಮಗಳ ಮೂಲಕ ನಡೆಯುತ್ತದೆ. |

# ಅಧ್ಯಾಯ – 9
# ಆನುವಂಶೀಯತೆ ಮತ್ತು ಜೀವ ವಿಕಾಸ

19. ಗಳಿಸಿದ ಗುಣ ಲಕ್ಷಣಗಳಿಗೂ ಅನುವಂಶೀಯ ಗುಣಗಳಿಗೂ ಇರುವ ವ್ಯತ್ಯಾಸಗಳೇನು ?

| ಗಳಿಸಿದ ಗುಣಗಳು | ಅನುವಂಶೀಯ ಗುಣಗಳು |
|---|---|
| ▪ ಒಂದು ಜೀವಿಯು ವಿಶೇಷವಾದ ಪರಿಸ್ಥಿತಿಗಳಲ್ಲಿ ಗಳಿಸಿಕೊಂಡಿರುವ ಗುಣಗಳಾಗಿವೆ.<br>▪ ಈ ಗುಣಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆ ಗೊಳ್ಳುವುದಿಲ್ಲ.<br>▪ ಈ ಗುಣಗಳು ಜೀವವಿಕಾಸವನ್ನು ನಿರ್ದೇಶಿಸುವುದಿಲ್ಲ.<br>▪ ಉದಾಹರಣೆ : ಹಸಿವಿನ ಕಾರಣದಿಂದ ಜೀರುಂಡೆಯ ತೂಕವು ಕಡಿಮೆಯಾಗಿರುವುದು. • | ▪ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆ ಹೊಂದಿರುವ ಗುಣಗಳು<br>▪ ಈ ಗುಣಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆಗೊಳ್ಳುತ್ತವೆ.<br>▪ ಈ ಗುಣಗಳು ಜೀವವಿಕಾಸವನ್ನು ನಿರ್ದೇಶಿಸುತ್ತವೆ.<br>▪ ಉದಾಹರಣೆ: ಕಣ್ಣು ಮತ್ತು ಕೂದಲಿನ ಬಣ್ಣ |

ರಚನಾನುರೂಪಿ ಅಂಗಗಳು ಮತ್ತು ಕಾರ್ಯರೂಪ ಅಂಗಗಳಿಗೆ ಇರುವ ವ್ಯತ್ಯಾಸಗಳು

| ರಚನಾನುರೂಪಿ ಅಂಗಗಳು | ಕಾರ್ಯಾನುರೂಪಿ ಅಂಗಗಳು |
|---|---|
| • ವಿಭಿನ್ನ ಜೀವಿಗಳ ಅಂಗಗಳು ಒಂದೇ ಮೂಲವನ್ನು ಹೊಂದಿರುತ್ತವೆ. | • ಎಲ್ಲ ಜೀವಿಗಳ ಅಂಗಗಳು ಬೇರೆಬೇರೆ ಮೂಲವನ್ನು ಹೊಂದಿರುತ್ತವೆ. |
| • ಒಂದೇ ರೀತಿಯ ರಚನೆಯನ್ನು ಹೊಂದಿದ್ದು ಬೇರೆ ಬೇರೆ ಕಾರ್ಯನಿರ್ವಹಿಸುತ್ತವೆ. | • ಬೇರೆ ಬೇರೆ ರೀತಿಯ ರಚನೆ ಹೊಂದಿದ್ದು ಒಂದೇ ಕಾರ್ಯನಿರ್ವಹಿಸುತ್ತವೆ. |
| • ಉದಾ : ಕಪ್ಪೆಯ ಮುಂಗಾಲುಗಳು, ಪಕ್ಷಿಯ ಮುಂಗಾಲುಗಳು | • ಉದಾ : ಪಕ್ಷಿಯ ರೆಕ್ಕೆಗಳು ಮತ್ತು ಬಾವಲಿಯ ರೆಕ್ಕೆ ಗಳು |

# ಅಧ್ಯಾಯ – 10

# ಬೆಳಕು,ಪ್ರತಿಫಲನ ಮತ್ತು ವಕ್ರೀಭವನ

**3.ಪೀನ ಮಸೂರ ಮತ್ತು ನಿಮ್ನ ಮಸೂರಗಳಿಗಿರುವ ವ್ಯತ್ಯಾಸವೇನು ?**

| ಪೀನ ಮಸೂರ | ನಿಮ್ನ ಮಸೂರ |
|---|---|
| ▪ ಅಂಚಿನಲ್ಲಿ ತೆಳುವಾಗಿದ್ದು ಮಧ್ಯದಲ್ಲಿ ದಪ್ಪನಾಗಿರುತ್ತದೆ.<br>▪ ಬೆಳಕಿನ ಕಿರಣಗಳನ್ನು ಕೇಂದ್ರಿಕರಿಸುತ್ತದೆ.<br>▪ ಸತ್ಯ ಮತ್ತು ತಲೆಕೆಳಗಾದ ಪ್ರತಿಬಿಂಬವನ್ನು ಉಂಟು ಮಾಡುತ್ತದೆ.<br>▪ ಪ್ರತಿಬಿಂಬವನ್ನು ಪರದೆಯ ಮೇಲೆ ಪಡೆಯಬಹುದು. | ▪ ಅಂಚಿನಲ್ಲಿ ದಪ್ಪನಾಗಿದ್ದು ಮಧ್ಯದಲ್ಲಿ ತೆಳುವಾಗಿರುತ್ತದೆ.<br>▪ ಬೆಳಕಿನ ಕಿರಣಗಳನ್ನು ವಿಕೇಂದ್ರಿಕರಿಸುತ್ತದೆ.<br>▪ ಮಿಥ್ಯ ಮತ್ತು ನೇರ ಪ್ರತಿಬಿಂಬವನ್ನು ಉಂಟು ಮಾಡುತ್ತದೆ.<br>▪ ಪ್ರತಿಬಿಂಬವನ್ನು ಪರದೆಯ ಮೇಲೆ ಪಡೆಯಲು ಸಾಧ್ಯವಿಲ್ಲ. |

**4.ಸತ್ಯ ಮತ್ತು ಮಿಥ್ಯ ಪ್ರತಿಬಿಂಬಗಳಿಗಿರುವ ವ್ಯತ್ಯಾಸವೇನು ?**

| ಸತ್ಯ ಪ್ರತಿಬಿಂಬ | ಮಿಥ್ಯ ಪ್ರತಿಬಿಂಬ |
|---|---|
| ▪ ಸತ್ಯ ಮತ್ತು ತಲೆಕೆಳಗಾಗಿರುತ್ತದೆ.<br>▪ ಸತ್ಯಪ್ರತಿಬಿಂಬವನ್ನು ಪರದೆಯ ಮೇಲೆ ಪಡೆಯಬಹುದು. | ▪ ಮಿಥ್ಯ ಮತ್ತು ನೇರ ವಾಗಿರುತ್ತದೆ.<br>▪ ಮಿಥ್ಯಪ್ರತಿಬಿಂಬವನ್ನು ಪರದೆಯ ಮೇಲೆ ಪಡೆಯಲು ಸಾಧ್ಯವಿಲ್ಲ. |

| ನಿಮ್ನ ದರ್ಪಣ | ಪೀನ ದರ್ಪಣ |
|---|---|
| ▪ ಪ್ರತಿ ಫಲಿಸುವ ಮೇಲ್ಮೈ ಒಳಮುಖವಾಗಿ ಬಾಗಿರುತ್ತದೆ.<br>▪ ಬೆಳಕಿನ ಕಿರಣಗಳನ್ನು ಕೇಂದ್ರೀಕರಿಸುತ್ತದೆ.<br>▪ ಪ್ರದಾನ ಸಂಗಮ ದರ್ಪಣದ ಮುಂದೆ ಇರುತ್ತದೆ | ▪ ಪ್ರತಿ ಫಲಿಸುವ ಮೇಲ್ಮೈಹೊರಮುಖವಾಗಿ ಬಾಗಿರುತ್ತದೆ.<br>▪ ಬೆಳಕಿನ ಕಿರಣಗಳನ್ನು ವಿಕೇಂದ್ರೀಕರಿಸುತ್ತದೆ.<br>▪ ಪ್ರದಾನ ಸಂಗಮ ದರ್ಪಣದ ಹಿಂದೆ ಇರುತ್ತದೆ |

# ಅಧ್ಯಾಯ–11

## ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

| ಸಮೀಪ ದೃಷ್ಟಿ | ದೂರ ದೃಷ್ಟಿ |
|---|---|
| ▪ ಸಮೀಪದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯ.ಆದರೆ, ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ<br>▪ ಕಣ್ಣಿನ ಮಸೂರದ ವಿಪರೀತ ವಕ್ರತೆ, ಕಣ್ಣುಗುಡ್ಡೆಯ ಸಹಜ ಸ್ಥಿತಿಗಿಂತ ಉದ್ದವಾಗಿರುವುದು.<br>▪ ನಿಮ್ನ ಮಸೂರ ಉಪಯೋಗಿಸಿ ಸಮೀಪ ದೃಷ್ಟಿ ದೋಷವನ್ನು ನಿವಾರಿಸಬಹುದು. | ▪ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿದ್ದು, ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲದ ಕಣ್ಣಿನ ಸ್ಥಿತಿಗೆ ದೂರದೃಷ್ಟಿ ಎನ್ನುತ್ತಾರೆ.<br>▪ ಕಣ್ಣಿನ ಮಸೂರದ ಸಂಗಮದೂರ ಉದ್ದವಾಗಿರುವುದು.ಕಣ್ಣುಗುಡ್ಡೆಯ ಅತಿ ಚಿಕ್ಕದಾಗಿರುವುದು.<br>▪ ಪೀನಮಸೂರವನ್ನು ಬಳಸಿ ದೂರದೃಷ್ಟಿಯನ್ನು ನಿವಾರಿಸ ಬಹುದು. |

| ಕಣ್ಣಿನ ಕನಿಷ್ಠ ದೂರ | ಕಣ್ಣಿನ ಗರಿಷ್ಠ ದೂರ |
|---|---|
| • ಕಣ್ಣಿಗೆ, ವಸ್ತು ಸ್ಪಷ್ಟವಾಗಿ ಹಾಗೂ ಒತ್ತಡರಹಿತವಾಗಿ ಕಾಣುವ ಕನಿಷ್ಠ ದೂರವನ್ನು ಕಣ್ಣಿನ ಕನಿಷ್ಠ ದೂರ ಎನ್ನುತ್ತೇವೆ. ಇದನ್ನು ಕಣ್ಣಿನ ಸಮೀಪ ಬಿಂದು ಎಂದು ಸಹ ಕರೆಯುತ್ತಾರೆ.<br>• ಕನಿಷ್ಠ ದೂರ 25 ಸೆಂ.ಮೀ | • ಕಣ್ಣು ಸ್ಪಷ್ಟವಾಗಿ ವೀಕ್ಷಿಸಲು ಸಾಧ್ಯವಾಗುವ ಅತಿ ಗರಿಷ್ಠ ದೂರವನ್ನು ಕಣ್ಣಿನ ಗರಿಷ್ಠ ದೂರ ಎನ್ನುತ್ತಾರೆ.<br>• ಕಣ್ಣಿನ ಗರಿಷ್ಠ ದೂರ ಸಾಮಾನ್ಯ ಕಣ್ಣಿಗೆ ಅನಂತ ದೂರವಾಗಿದೆ. |

# ಅಧ್ಯಾಯ – 12

# ವಿದ್ಯುಚ್ಛಕ್ತಿ

| ಸರಣಿ ಕ್ರಮ | ಸಮಾಂತರ ಕ್ರಮ |
|---|---|
| • ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾಗಿ ವಿಭಿನ್ನ ಮೌಲ್ಯಗಳ ವಿದ್ಯುತ್ಪ್ರವಾಹದ ಅಗತ್ಯವಿದೆ.<br>• ಯಾವುದಾದರೂ ಒಂದು ಘಟಕ ವಿಫಲವಾದರೆ ಮಂಡಲವು ಮುರಿದುಹೋಗುತ್ತದೆ ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. | • ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತವೆ.<br>• ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯನಿರ್ವಹಿಸಲು ವಿಭಿನ್ನ ವಿದ್ಯುತ್ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾಂತರ ಜೋಡಣೆ ಸಹಕಾರಿಯಾಗಿದೆ./ ಸಮಾಂತರ ಜೋಡಣೆಯಲ್ಲಿ ಪ್ರತಿಯೊಂದು ವಿದ್ಯುತ್ ಉಪಕರಣವನ್ನು ಪ್ರತ್ಯೇಕವಾಗಿ ಉಪಯೋಗಿಸಬಹುದು. |

# ಅಧ್ಯಾಯ –13

# ವಿದ್ಯುತ್‌ಪ್ರವಾಹದ ಕಾಂತೀಯ ಪರಿಣಾಮಗಳು

**6. ವಿದ್ಯುತ್‌ಕಾಂತಕ್ಕೂ(ಸೊಲೆನಾಯ್ಡ್) ,ಶಾಶ್ವತ ಕಾಂತಕ್ಕೂ (ದಂಡಕಾಂತ) ಇರುವ ವ್ಯತ್ಯಾಸವೇನು ?**

| ವಿದ್ಯುತ್‌ಕಾಂತ | ಶಾಶ್ವತ ಕಾಂತ |
|---|---|
| • ತಾತ್ಕಾಲಿಕ ಅಥವಾ ಕೃತಕ ಕಾಂತವಾಗಿದೆ.ವಿದ್ಯುತ್ ಪ್ರವಹಿಸಿದರೆ ಮಾತ್ರ ಕಾಂತದಂತೆ ವರ್ತಿಸುತ್ತದೆ.<br>• ವಿದ್ಯುತ್ ಕಾಂತದ ಧ್ರುವಗಳು ಅಸ್ಥಿರವಾಗಿದ್ದು ಬದಲಿಸಬಹುದಾಗಿವೆ<br>• ಪ್ರಬಲ ಕಾಂತವಾಗಿದೆ. | • ದಂಡಕಾಂತವು ಶಾಶ್ವತ ಕಾಂತವಾಗಿದೆ.<br>• ದಂಡಕಾಂತದ ಧ್ರುವಗಳು ಸ್ಥಿರವಾಗಿದ್ದು ಬದಲಿಸಲು ಸಾಧ್ಯವಿಲ್ಲ.<br>• ದುರ್ಬಲ ಕಾಂತವಾಗಿದೆ. |

**9. ಎ,ಸಿ ವಿದ್ಯುತ್‌ಜನಕ ಮತ್ತು ಡಿ.ಸಿ.ವಿದ್ಯುತ್ ಜನಕಗಳಿಗಿರುವ ವ್ಯತ್ಯಾಸಗಳೇನು ?**

| ಎ,ಸಿ ವಿದ್ಯುತ್‌ಜನಕ | ಡಿ.ಸಿ.ವಿದ್ಯುತ್ ಜನಕ |
|---|---|
| • ಪರ್ಯಾಯ ವಿದ್ಯುತ್ ಅನ್ನು ಉತ್ಪಾದಿಸುತ್ತದೆ.<br>• ಜಾರು ಉಂಗುರಗಳನ್ನು ಹೊಂದಿದೆ. | • ನೇರ ವಿದ್ಯುತ್ ಅನ್ನು ಉತ್ಪಾದಿಸುತ್ತದೆ.<br>• ಒಡಕು ಉಂಗುರಗಳನ್ನು ಹೊಂದಿದೆ. |

**10. ನೇರ ವಿದ್ಯುತ್‌ಗೂ ಪರ್ಯಾಯ ವಿದ್ಯುತ್‌ಗೂ ಇರುವ ವ್ಯತ್ಯಾಸಗಳೇನು ?**

| ನೇರ ವಿದ್ಯುತ್ | ಪರ್ಯಾಯ ವಿದ್ಯುತ್ |
|---|---|
| • ಇದು ಯಾವಾಗಲೂ ಒಂದೇ ದಿಕ್ಕಿನಲ್ಲಿ ಹರಿಯುತ್ತದೆ.<br>• ನೇರ ವಿದ್ಯುತ್ ಅನ್ನು ದೂರದ ಸ್ಥಳಗಳಿಗೆ ಶಕ್ತಿಯು ನಷ್ಟವಾಗದಂತೆ ಕಳುಹಿಸುವುದು ಕಷ್ಟ. | • ನಿಯತಕಾಲಿಕವಾಗಿ ಪ್ರತಿ ಅರ್ಧಸುತ್ತಿಗೊಮ್ಮೆ ತನ್ನ ದಿಕ್ಕನ್ನು ಬದಲಿಸುತ್ತದೆ.<br>• ಪರ್ಯಾಯ ವಿದ್ಯುತ್ ಅನ್ನು ದೂರದ ಸ್ಥಳಗಳಿಗೆ ಅದರಲ್ಲಿನ ಹೆಚ್ಚಿನ ಶಕ್ತಿಯು ನಷ್ಟವಾಗದಂತೆ ಕಳುಹಿಸಬಹುದು. |

# ಅಧ್ಯಾಯ – 14

## ಶಕ್ತಿಯ ಆಕರಗಳು

| ಜಲ ವಿದ್ಯುತ್ ಸ್ಥಾವರ | ಉಷ್ಣ ವಿದ್ಯುತ್ ಸ್ಥಾವರ |
|---|---|
| • ನೀರಿನ ಪ್ರಚ್ಛನ್ನ ಶಕ್ತಿಯನ್ನು ಟರ್ಬೈನ್ ತಿರುಗಿಸಲು ಬಳಸುತ್ತಾರೆ.<br>• ಪರಿಸರ ಸ್ನೇಹಿ,ಮಾಲಿನ್ಯ ಉಂಟುಮಾಡುವುದಿಲ್ಲ.<br>• ನವೀಕರಣಗೊಳ್ಳುವ ಶಕ್ತಿಯ ಆಕರ | • ಕಲ್ಲಿದ್ದಲಿನ ಉಷ್ಣಶಕ್ತಿಯಿಂದ ನೀರನ್ನು ಕಾಸಿ ಬರುವ ಹಬೆಯಿಂದ ಟರ್ಬೈನ್ ತಿರುಗಿಸಲಾಗುತ್ತದೆ.<br>• ಮಾಲಿನ್ಯ ಉಂಟುಮಾಡುತ್ತದೆ.<br>• ನವೀಕರಣಗೊಳ್ಳದ ಶಕ್ತಿಯ ಆಕರ |

| ಸಾಂಪ್ರದಾಯಿಕ ಶಕ್ತಿಯ ಆಕರಗಳು | ಅಸಾಂಪ್ರದಾಯಿಕ ಶಕ್ತಿಯ ಆಕರಗಳು |
|---|---|
| • ಪ್ರಕೃತಿಯಲ್ಲಿ ಕಡಿಮೆ ಪ್ರಮಾಣದಲ್ಲಿವೆ<br>• ನವೀಕರಣಗೊಳ್ಳುವುದಿಲ್ಲ<br>• ಮಾಲಿನ್ಯ ಉಂಟುಮಾಡುತ್ತವೆ<br>• ಉದಾ: ಕಲ್ಲಿದ್ದಲು ಮತ್ತು ಪೆಟ್ರೋಲಿಯಂ | • ಪ್ರಕೃತಿಯಲ್ಲಿ ಹೇರಳವಾಗಿವೆ<br>• ನವೀಕರಣಗೊಳ್ಳುತ್ತವೆ<br>• ಮಾಲಿನ್ಯ ಉಂಟುಮಾಡುವುದಿಲ್ಲ<br>• ಉದಾ: ಸೌರಶಕ್ತಿ, |

# ಅಧ್ಯಾಯ – 15
## ನಮ್ಮ ಪರಿಸರ

9. ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳು ಮತ್ತು ಜೈವಿಕ ವಿಘಟನೆಗೆ ಒಳಗಾಗದ ವಸ್ತುಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

| ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳು | ಜೈವಿಕ ವಿಘಟನೆಗೆ ಒಳಗಾಗದ ವಸ್ತುಗಳು |
|---|---|
| • ಸೂಕ್ಷ್ಮಜೀವಿಗಳಿಂದ ಕೊಳೆಯುತ್ತವೆ.<br>• ಪರಿಸರದಲ್ಲಿ ಇವುಗಳ ಉಳಿಯುವಿಕೆ ತಾತ್ಕಾಲಿಕ<br>• ಪರಿಸರ ಮಾಲಿನ್ಯ ಉಂಟು ಮಾಡುವುದಿಲ್ಲ.<br>ಉದಾ : ತರಕಾರಿ ಸಿಪ್ಪೆ,ಕಾಗದ.ಬಟ್ಟೆ ಇತ್ಯಾದಿ | • ಸೂಕ್ಷ್ಮಜೀವಿಗಳಿಂದ ಕೊಳೆಯುವುದಿಲ್ಲ.<br>• ಪರಿಸರದಲ್ಲಿ ಇವುಗಳು ದೀರ್ಘಕಾಲ ಉಳಿದು ಬಿಡುತ್ತವೆ.<br>• ಪರಿಸರ ಮಾಲಿನ್ಯ ಉಂಟು ಮಾಡುತ್ತವೆ<br>• ಉದಾ : ಪ್ಲಾಸ್ಟಿಕ್,ಗಾಜು,.ಡಿ.ಡಿ.ಟಿ, ಇತ್ಯಾದಿ |

# ಅಧ್ಯಾಯ –16
## ಸುಸ್ಥಿರ ನಿರ್ವಹಣೆಗಾಗಿ ನೈಸರ್ಗಿಕ ಸಂಪನ್ಮೂಲಗಳು

1. ಮರುಬಳಕೆ ಮತ್ತು ಮರುಚಕ್ರೀಕರಣಕ್ಕಿರುವ ವ್ಯತ್ಯಾಸಗಳನ್ನು ತಿಳಿಸಿ.

| ಮರು ಬಳಕೆ | ಮರು ಚಕ್ರೀಕರಣ |
|---|---|
| • ಮರುಬಳಕೆಯ ತಂತ್ರವೇನೆಂದರೆ ನೀವು ವಸ್ತುಗಳನ್ನು ಮತ್ತೆ ಮತ್ತೆ ಉಪಯೋಗಿಸಬಹುದು.<br>• ಬಳಸಿದ ಲಕೋಟೆಗಳನ್ನು ಎಸೆಯುವುದರ ಬದಲು ಅದನ್ನು ತಿರುಗಿಸಿ ಮತ್ತೆ ಪುನಃ ಬಳಸುವುದು | • ಪ್ಲಾಸ್ಟಿಕ್, ಕಾಗದ ಗಾಜುಗಳನ್ನು ಹೊಸದಾಗಿ ತಯಾರಿಸುವುದು ಅಥವಾ ಹೊರತೆಗೆಯುವುದರ ಬದಲು ಉಪಯೋಗಿಸಿದ ಪ್ಲಾಸ್ಟಿಕ್, ಕಾಗದ ಗಾಜು ಮತ್ತು ಲೋಹಗಳನ್ನು ಸಂಗ್ರಹಿಸಿ ಮರು ಚಕ್ರೀಕರಣ ಮಾಡಿ ಅಗತ್ಯ ವಸ್ತುಗಳನ್ನು ತಯಾರಿಸುವುದು. |

| ನವೀಕರಿಸಬಹುದಾದ ಶಕ್ತಿಯ ಮೂಲಗಳು | ನವೀಕರಿಸಲಾಗದ ಶಕ್ತಿಯ ಮೂಲಗಳು |
|---|---|
| • ನವೀಕರಿಸಬಹುದಾದ ಶಕ್ತಿಯ ಮೂಲಗಳು ಹೇರಳವಾಗಿವೆ.<br>• ಹೆಚ್ಚು ಹೆಚ್ಚು ಬಳಸಿ ಅಗತ್ಯ ಪ್ರಮಾಣದ ಶಕ್ತಿಯನ್ನು ಉತ್ಪಾದಿಸಬಹುದು.<br>• ಪರಿಸರ ಸ್ನೇಹಿ | • ನವೀಕರಿಸಲಾಗದ ಶಕ್ತಿಯ ರೂಪಗಳು ಕಡಿಮೆ ಪ್ರಮಾಣದಲ್ಲಿ ಇವೆ.<br>• ಅವುಗಳನ್ನು ಮಿತವಾಗಿ ಬಳಕೆ ಮಾಡುವುದು ಹಾಗೂ ಸಂರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.<br>• ಪರಿಸರ ಮಾಲಿನ್ಯ ಉಂಟುಮಾಡುತ್ತವೆ. |